

ರಾಧಾಕಾಂತ ದೇವಸ್ಥಾನ

ದಲ್ಲಿಯೇ ಅರ್ಚಕರಾಗಿ ತಮ್ಮ ದಕ್ಷಿಣೇಶ್ವರದ ವಾಸ್ತವ್ಯವನ್ನು ಆರಂಭಮಾಡಿದರು.

ಪ್ರಧಾನ ಗರ್ಭಗುಡಿಯ ಬಲಭಾಗದಲ್ಲಿ ಒಂದು ಸಣ್ಣ ಕೊಠಡಿ ಇದೆ. ಅಲ್ಲಿ ಇದೇ ರೀತಿಯ, ಶ್ರೀಕೃಷ್ಣನ ಇನ್ನೊಂದು ಮೂರ್ತಿಯಿದೆ. ಇದೇ ಮೊದಲಿಗೆ ಇದ್ದ ಪ್ರತಿಮೆ. ಒಂದು ದಿನ ಪೂಜಾರಿಯು ಈ ಮೂರ್ತಿಯನ್ನು ಇನ್ನೊಂದು ಕೊಠಡಿಗೆ ತೆಗೆದುಕೊಂಡು ಹೋಗುತ್ತಿದ್ದನು. ಜಾರಿಬಿದ್ದು ವಿಗ್ರಹದ ಒಂದು ಕಾಲು ಮುರಿದುಹೋಯಿತು. ಭಗ್ನಗೊಂಡ ಮೂರ್ತಿಯನ್ನು ಪೂಜಿಸುವುದು ಸರಿಯೇ ಎಂಬ ಪ್ರಶ್ನೆಯನ್ನು ಪಂಡಿತರ ಮುಂದೆ ಇಡಲಾಯಿತು. ಅವರು ಹಾಗೆ ಆಗದು ಎಂದು ಉತ್ತರಿಸಿದರು. ಮುರಿದ ಪ್ರತಿಮೆಯನ್ನು ಗಂಗೆಯಲ್ಲಿ ವಿಸರ್ಜಿಸಬೇಕೆಂದೂ ಅಭಿಪ್ರಾಯಪಟ್ಟರು. ಅದರ ಜಾಗದಲ್ಲಿ ಬೇರೊಂದು ಪ್ರತಿಮೆಯನ್ನು ಪ್ರತಿಷ್ಠಾಪಿಸಬೇಕೆಂದು ಸಲಹೆ ಇತ್ತರು.

ಆದರೆ ಶ್ರೀರಾಮಕೃಷ್ಣರ ಅಭಿಪ್ರಾಯವೇ ಬೇರೆಯದಾಗಿತ್ತು. ಅವರ ತಮ್ಮ ಭಾವಸ್ಥಿತಿಯಲ್ಲಿ ಹೀಗೆ ಹೇಳಿದರು: "ರಾಣಿ ರಾಸಮಣಿಯ ಅಳಿಯನೊಬ್ಬ ಕೆಳಕ್ಕೆ ಬಿದ್ದು ಕಾಲು ಮುರಿದುಕೊಳ್ಳುತ್ತಾನೆ ಅಂದುಕೊಳ್ಳಿ. ರಾಣಿ ಅವನನ್ನು ಕೈಬಿಟ್ಟು, ಬೇರೆ ಅಳಿಯನನ್ನು ತಂದುಕೊಳ್ಳಬೇಕೋ, ಇಲ್ಲವೇ ಅವನ ಚಿಕಿತ್ಸೆಗೆ ಸರಿಯಾದ ಏರ್ಪಾಡು ಮಾಡಬೇಕೋ? ಇಲ್ಲಿಯೂ ಇದೇ ವಿಧಾನವನ್ನು ಅನುಸರಿಸಬೇಕು. ವಿಗ್ರಹದ ಮುರಿದಿರುವ ಕಾಲನ್ನು ಸೇರಿಸಿ, ಇದೇ ಮೂರ್ತಿಯ ಪೂಜೆಯನ್ನು ಮುಂದುವರಿಸಬೇಕು." ಶ್ರೀರಾಮಕೃಷ್ಣರು ಸ್ವತಃ ತಾವೇ, ಮುರಿದ ಭಾಗವನ್ನು ಅಂದವಾಗಿ ಕೂಡಿಸಿಕೊಟ್ಟರು. ಅದನ್ನು ಎಷ್ಟು ಚೆನ್ನಾಗಿ ಮಾಡಿದರೆಂದರೆ, ಈಗಲೂ ಆ ವಿಗ್ರಹ ಮುರಿದಿತ್ತು ಎಂದು ಹೇಳುವ ಹಾಗೆಯೇ ಇಲ್ಲ. ಆದರೂ, ರಾಣಿ ರಾಸಮಣಿ ಮತ್ತು ಮಥುರಾನಾಥರು ಕಾಲವಾಗಿ ಬಹಳ ಕಾಲದ ನಂತರ, ಮುರಿದಿದ್ದ ಈ ವಿಗ್ರಹವನ್ನು ಪಕ್ಕದ ಕೊಠಡಿಗೆ ತಂದಿರಿಸಲಾಯಿತು. ಹೊಸದೊಂದು ವಿಗ್ರಹವನ್ನು ಅದರ ಸ್ಥಾನದಲ್ಲಿ ಪ್ರತಿಷ್ಠಾಪಿಸಲಾಯಿತು.


ರಾಧಾಕಾಂತ ದೇವಸ್ಥಾನದ ಹೊರ ಅಂಗಣವು ಶ್ರೀರಾಮಕೃಷ್ಣರ ಭಕ್ತರಿಗೆ ವಿಶೇಷವಾಗಿ ಪವಿತ್ರಸ್ಥಾನವಾಗಿದೆ. ಇದಕ್ಕೆ ಕಾರಣ, ಎಲ್ಲಾ ಕಡೆಯಲ್ಲಿಯೂ ಪೂಜಿಸಲ್ಪಡುತ್ತಿರುವ ಶ್ರೀರಾಮಕೃಷ್ಣರ ಛಾಯಾಚಿತ್ರವನ್ನು ತೆಗೆದಿದ್ದು ಇಲ್ಲಿಯೇ. ಒಮ್ಮೆ ಶ್ರೀರಾಮಕೃಷ್ಣರೇ ಅದನ್ನು ಪೂಜಿಸಿ, ಈ ಭವಿಷ್ಯವಾಣಿಯನ್ನು ನುಡಿದರು: "ಈ ಚಿತ್ರದಲ್ಲಿ ಯೋಗದ ಅತ್ಯುನ್ನತ ಸ್ಥಿತಿಯನ್ನು ಕಾಣಬಹುದು. ಇದು ಮನೆಮನೆಯಲ್ಲಿಯೂ ಪೂಜಿಸಲ್ಪಡುತ್ತದೆ."

### ಶಿವಮಂದಿರಗಳು

ಇಲ್ಲಿರುವ ಹನ್ನೆರಡು ಮಂದಿರಗಳಲ್ಲಿ, ಶಿವನ ಹನ್ನೆರಡು ವಿವಿಧ ಸ್ವರೂಪಗಳನ್ನು ಪ್ರತಿನಿಧಿಸುವ ಶಿವಲಿಂಗಗಳಿವೆ.

ಒಂದು ದಿನ ಶ್ರೀರಾಮಕೃಷ್ಣರು ಈ ಶಿವಮಂದಿರಗಳಲ್ಲಿ ಒಂದು ದೇಗುಲವನ್ನು ಪ್ರವೇಶಿಸಿದರು. ಅಲ್ಲಿ ನಿಂತು 'ಶಿವಮಹಿಮ್ನಾ ಸ್ತೋತ್ರ' ವನ್ನು ಭಕ್ತಿಭಾವದಿಂದ ಪಠಿಸಲಾರಂಭಿಸಿದರು. ಹಾಗೆಯೇ ಆ ಮಹಾದೇವನ ಅಪಾರ ಮಹಿಮೆಯ ಮಹದನುಭವದಲ್ಲಿ ಮಗ್ನರಾಗಿ ಹೋದರು. ಗಟ್ಟಿಯಾಗಿ ಪ್ರಾರ್ಥಿಸಲಾರಂಭಿಸಿದರು: "ಓ ಮಹಾದೇವ! ನಿನ್ನ ಮಹಿಮೆಯನ್ನು ನಾನು ಹೇಗೆ ತಾನೇ ಹೇಳಲಿ?!" ಅವರ ಕಣ್ಣುಗಳಿಂದ ಹರಿದ ಅಶ್ರುಧಾರೆ ಅವರ ಕೆನ್ನೆಗಳು, ಎದೆ ಮತ್ತು ಬಟ್ಟೆಗಳ ಮೇಲೆಯೂ ಧಾರಾಕಾರವಾಗಿ ಹರಿದು, ಅವೆಲ್ಲವನ್ನೂ ತೋಯಿಸಿತು. ಕಡೆಗೆ ನೆಲವನ್ನೂ ಒದ್ದೆಯನ್ನಾಗಿ ಮಾಡಿತು. ಹುಚ್ಚರಂತೆ ವರ್ತಿಸುತ್ತಿದ್ದ ಶ್ರೀರಾಮಕೃಷ್ಣರ ಗಟ್ಟಿ ದನಿಯ ಆರ್ತನಾದವನ್ನೂ, ಗದ್ಗದ ದನಿಯ ಆಕ್ರಂದನವನ್ನೂ ಕೇಳಿ, ದೇವಸ್ಥಾನದ ಸೇವಕರು, ಅಧಿಕಾರಿಗಳು, ಎಲ್ಲೆಡೆಗಳಿಂದಲೂ ಓಡೋಡಿ ಬಂದರು.

ಕೆಲವೊಮ್ಮೆ ಈ ದೇಗುಲಗಳಿಗೆ ಹೋಗುವ ಮೆಟ್ಟಿಲುಗಳ ಮೇಲೆ ಕುಳಿತುಕೊಂಡು, ಶ್ರೀರಾಮಕೃಷ್ಣರು ಭಕ್ತರೊಡನೆ ಮಾತುಕತೆಯಾಡುತ್ತಿದ್ದರು. (ಮುಂದುವರಿಯುವುದು)



ಶಿವ ದೇಗುಲಗಳು